***ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 24.04.2026***

***<u>ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ</u>***

***ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ನಾನೇ ಪ್ರಮಾಣೀಕರಿಸಿದ ನನ್ನ ಶಪಥ ಪತ್ರದ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಹಾಗೂ ಅವುಗಳಲ್ಲಿರುವ ಸಹಿಗಳು ನನ್ನವೇ ಆಗಿವೆ.***

*ನಿಡಿ.1 ರಲ್ಲಿರುವ ಸಹಿ ತನ್ನದು ಎಂದು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಡಿ.1 ಜಿ ಎಂದು ಗುರುತಿಸಲಾಯಿತು. ಎಸ್ ಡಿ ಶಿವಣ್ಣೇಗೌಡ, ಕಾಳೇಗೌಡ, ಕೃಷ್ಣ ಹಾಗೂ ಸಾಕ್ಷೀದಾರರು ನನ್ನ ಸಮಕ್ಷಮ ನಿಡಿ.1 ಕ್ಕೆ ಸಹಿ ಮಾಡಿರುತ್ತಾರೆ. ಪುಟ್ಟರಾಜು ವಕೀಲರ ಬಳಿ ಅದನ್ನು ನೋಟರಿ ಮಾಡಿಸಿದರು.*

***<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>***

*1. ವಾದಿ ಮತ್ತು ಪ್ರತಿವಾದಿಗಳು ನನಗೆ ಚಿಕ್ಕಪ್ಪನ ಮಕ್ಕಳಾಗಬೇಕು. ವಾದಿ ಮತ್ತು ಪ್ರತಿವಾದಿಯ ತಂದೆ ಎಸ್ ಡಿ ಶಿವಣ್ಣೇಗೌಡ ನನ್ನ ತಂದೆಯ ತಮ್ಮ. ದಾವಾಸ್ತಿಗಳು ಎಲ್ಲವು ಎಸ್ ಡಿ ಶಿವಣ್ಣೇಗೌಡರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ಶಿವಣ್ಣೇಗೌಡರವರ ಮರಣಾ ನಂತರ ವಾದಿ ಮತ್ತು ಪ್ರತಿವಾದಿಗಳು ಇಬ್ಬರೆ ಶಿವಣ್ಣೇಗೌಡರ ವಾರಸುದಾರರು ಎಂದರೆ ಸರಿ. ನಿಡಿ.1 ಕ್ಕೆ ನಾನು ಸಹಿ ಮಾಡುವಾಗ ಬೇರೆ ಸಾಕ್ಷೀದಾರರು ನನ್ನ ಸಮಕ್ಷಮ ಸಹಿ ಮಾಡಿಲ್ಲ. ನಿಡಿ.1 ಕ್ಕೆ*

ಪಾಂಡವಪುರದ ತಾಲ್ಲೂಕು ಕಚೇರಿ ಹತ್ತಿರ ಒಂದು ಮಳಿಗೆಯ ಒಳಗೆ ನಾನು ಸಹಿ ಮಾಡಿದೆನು. ಸಿ ಪುಟ್ಟಗರಾಜು ಎನ್ನುವ ವಕೀಲರ ಬಗ್ಗೆ ನನಗೆ ಗೊತ್ತಿಲ್ಲ. ಶ್ರೀನಿವಾಸ್ ಎನ್ನುವ ಪತ್ರ ಬರಹಗಾರರ ಹೆಸರು ನನಗೆ ಗೊತ್ತಿಲ್ಲ. ನಿಡಿ.1 ರಲ್ಲಿರುವ ನಿಮ್ಮ ಹೆಸರಿನ ಮುಂದೆ ಬರೆದಿರುವ ಸನ್ ಆಫ್ ಕಾಳೇಗೌಡ ಎಂಬುದನ್ನು ಯಾರು ಬರೆದರು ಎಂದರೆ ಸಾಕ್ಷಿ ಪಕ್ಕ ಯಾರೋ ಇದ್ದವರು ಸನ್ ಆಫ್ ಕಾಳೇಗೌಡ ಎಂದು ಬರೆದರು ಎಂದು ಹೇಳುತ್ತಾರೆ. ನಿಡಿ.1 ರಲ್ಲಿ ಸುಂಕಾತೊಣ್ಣೂರು ಎಂದು ಬರೆಸಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಡಿ.1 ರಲ್ಲಿ ನಿಮ್ಮ ಪೂರ್ಣ ವಿಳಾಸ ಬರೆದಿಲ್ಲ ಎಂದರೆ ಸರಿ.

2. ಪತ್ರ ಬರೆದ ಬರಹಗಾರರ ಪುಸ್ತಕಕ್ಕೆ ನಾನು ಸಹಿ ಮಾಡಿಲ್ಲ. ನಿಡಿ.1 ರಲ್ಲಿರುವ ಕಾಳೇಗೌಡ ಎನ್ನುವ ಸಹಿಯನ್ನು ವಾದಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ.1 ರಲ್ಲಿ ಯಾರ್ಯಾರಿಗೆ ಯಾವ ಯಾವ ಸರ್ವೆ ನಂಬರುಗಳು ಸೇರಬೇಕೆಂದು ಬರೆದಿತ್ತು ಎಂದು ನಾನು ಓದಿ ತಿಳಿದುಕೊಂಡಿಲ್ಲ. ವಾದಿ ಮತ್ತು ಪ್ರತಿವಾದಿಗಳ ತಂದೆ ಬದುಕಿದ್ದಾಗ ಕುಟುಂಬದ ವ್ಯವಹಾರಗಳನ್ನು ಅವರೇ ಮಾಡುತ್ತಿದ್ದರು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ತಂದೆ ಸತ್ತ ನಂತರ ಅವರುಗಳು ಜಂಟಿಯಾಗಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಯಾವ ಯಾವ ಸರ್ವೆ ನಂಬರುಗಳಲ್ಲಿ ವಾದಿ ಮತ್ತು ಪ್ರತಿವಾದಿ ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದಾರೆಂದು ನನಗೆ ಹೇಳಲು ಗೊತ್ತಾಗುವುದಿಲ್ಲ. ಆದರೆ ಯಾವ ಯಾವ ಕಡೆ ಮಾಡುತ್ತಿದ್ದಾರೆಂದು ಹೇಳುತ್ತೇನೆ ಎಂದು ಹೇಳುತ್ತಾರೆ. ವಾದಿ ಮತ್ತು ಪ್ರತಿವಾದಿಗಳು

ಅವರುಗಳ ಅನುಕೂಲಕ್ಕೆ ತಕ್ಕ ಹಾಗೆ ವ್ಯವಸಾಯ ಮಾಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳು ಸುಂಕಾತೊಣ್ಣೂರು ಗ್ರಾಮದಲ್ಲಿ ಒಂದೇ ಮನೆಯಲ್ಲಿ ವಾಸವಿದ್ದಾರೆ. ವಾದಿಮತ್ತು ಪ್ರತಿವಾದಿಗಳಿಗೆ ಸುಂಕಾತೊಣ್ಣೂರು ಗ್ರಾಮದಲ್ಲಿ ಎರಡು ಮನೆಗಳು ಇವೆ ಎಂದರೆ ಸರಿ. ಇನ್ನು ಒಂದು ಮನೆಯಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿ ಅದು ಶಿಥಿಲಾವಸ್ಥೆಯಲ್ಲಿದೆ ಯಾರು ವಾಸವಿಲ್ಲ ಎಂದು ಹೇಳುತ್ತಾರೆ. ಮನೆ ಮತ್ತು ಜಮೀನಿನ ಕಂದಾಯ ದಾಖಲಾತಿಗಳು ಶಿವಣ್ಣೇಗೌಡರ ಹೆಸರಿನಲ್ಲಿ ಮುಂದುವರಿಯುತ್ತಿವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

3. ಶಿವಣ್ಣೇಗೌಡರು ಬದುಕಿದ್ದ ಕಾಲದಲ್ಲಿ ಅವರ ಜಮೀನಿನಲ್ಲಿ ಎರಡು ಬೋರ್ ತೆಗೆಸಿದ್ದರು ಎಂದರೆ ಸಾಕ್ಷಿ ಒಂದು ಕಡೆ ತೆಗೆಸಿದ್ದರು ಎಂದು ಹೇಳುತ್ತಾರೆ. ಶಿವಣ್ಣೇಗೌಡರ ಮರಣಾನಂತರ ಇನ್ನು ಒಂದು ಬೋರ್ ಹಾಕಿಸಿದೆ. ಆ ಬೋರನ್ನು ಯಾವ ವರ್ಷದಲ್ಲಿ ಹಾಕಿಸಿದರು ಎಂದು ನನಗೆ ಗೊತ್ತಿಲ್ಲ. ವಾದಿ 6 ನೇ ತರಗತಿ ಮತ್ತು ಪ್ರತಿವಾದಿ ಎಸ್ ಎಸ್ ಎಲ್ ಸಿ ವರೆಗೆ ಓದಿದ್ದಾರೆ. ವಾದಿ ಮತ್ತು ಪ್ರತಿವಾದಿಗಳ ನಡುವೆ ನೊಂದಾಯಿತ ವಿಭಾಗ ಪತ್ರ ಆಗಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಪ್ರತಿವಾದಿಯ ಮದುವೆ ಅವರ ತಂದೆ ಮೃತರಾದ ಒಂದು ತಿಂಗಳಿಗೆ ಆಯಿತು. ಶಿವಣ್ಣೇಗೌಡರ ಹೆಂಡತಿ ಮೃತರಾಗಿ ಈಗ್ಗೆ 10-15 ವರ್ಷವಾಗಿದೆ. ಕಾಳೇಗೌಡರ ವಿವಾಹವಾಗಿ ಈಗ್ಗೆ 15 ವರ್ಷವಾಗಿದೆ.

4. ಶಿವಣ್ಣೇಗೌಡರ ಹೆಂಡತಿ ಮೃತರಾದ ನಂತರ ಶಿವಣ್ಣೇಗೌಡರ ಯೋಗಕ್ಷೇಮವನ್ನು ಕಾಳೇಗೌಡ ಮತ್ತು ಅವರ ಹೆಂಡತಿ ಹೆಂಡತಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸಾಕ್ಷಿ ಸ್ವತಃ ಕಾಳೇಗೌಡರ

*ಹೆಂಡತಿ ಊರಿಗೆ ಹೋದಾಗ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಶಿವಣ್ಣೇಗೌಡರವರು ಅನಾರೋಗ್ಯದ ಕಾರಣ ಮೃತರಾದರು. ಸಾಯುವ ಆರು ತಿಂಗಳ ಮೊದಲಿನಿಂದಲೂ ಅನಾರೋಗ್ಯದಿಂದ ಬಳಲುತ್ತಿದ್ದರು. ಸಾಯುವ ತನಕ ಶಿವಣ್ಣೇಗೌಡರ ಯೋಗಕ್ಷೇಮವನ್ನು ಕಾಳೇಗೌಡ ಮತ್ತು ಅವರ ಹೆಂಡತಿ ಹಾಗೂ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಶಿವಣ್ಣೇಗೌಡರು ಕಾಯಿಲೆಯಿಂದ ಬಳಲುತ್ತಿದ್ದಾಗ ಕಾಳೇಗೌಡ ವ್ಯವಸಾಯ ಮಡುತ್ತಿದರು, ಅದಕ್ಕೆ ಬೇಕಾದ ಸೌಕರ್ಯವನ್ನು ಪ್ರತಿವಾದಿ ಮಾಡುತ್ತಿದ್ದರು ಎಂದರೆ ಸಾಕ್ಷಿ ಇಬ್ಬರು ಮಾಡುತ್ತಿದ್ದರು ಎಂದು ಹೇಳುತ್ತಾರೆ. ಪ್ರತಿವಾದಿಯ ಮದುವೆಯ ನಂತರ ಸಂಸಾರದ ಉದ್ದೇಶಕ್ಕಾಗಿ ಒಂದೇ ಮನೆಯಲ್ಲಿ ಬೇರೆಯಾಗಿ ವಾಸಿಸುತ್ತಿದ್ದಾರೆ ಎಂದರೆ ಸರಿ. ನಿಡಿ.1 ಕ್ಕೆ ಸುಮಾರು ಆರು ವರ್ಷದ ಹಿಂದೆ ಸಹಿ  ಮಾಡಿದ್ದು ಖಚಿತ ದಿನಾಂಕ, ತಿಂಗಳು ವರ್ಷ ಹೇಳಲಾಗುವುದಿಲ್ಲ. ನೀವು ಪ್ರತಿವಾದಿಯ ಪರವಾಗಿ ಸಾಕ್ಷಿ ಕೊಡಲು ಬಂದಿರುತ್ತೀರಾ ಎಂದರೆ ಸರಿಯಲ್ಲ.*

***<u>ಮರು ವಿಚಾರಣೆ ಇಲ್ಲ.</u>***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬರೆಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆಎಂಎಫ್‌ಸಿ., ಪಾಂಡವಪುರ.***